ಸೃಜನಿ

**SRUJANI: Indian Journal of Innovative Research and Development (SIJIRD)**
Volume-3 Issue 3, July-August 2024, Pp. 40-47
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಜನಪದ ಮಹಾಕಾವ್ಯಗಳಲ್ಲಿ ದುಷ್ಟ ಶಿಕ್ಷೆ–ಶಿಷ್ಟ ರಕ್ಷಣೆಯ ಅನುಸರಣೆ

**ಡಾ. ಲಕ್ಷ್ಮಿ ನರಸಮ್ಮ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್.

**Abstract:**
*ಹೆಸರೇ ಹೇಳುವಂತೆ ದುಷ್ಟಶಿಕ್ಷೆ ಶಿಷ್ಟರಕ್ಷೆ ದುಷ್ಟರನ್ನು ನಾಶಮಾಡಿ ಶಿಷ್ಟರನ್ನು ರಕ್ಷಿಸಿ ಉಳಿಸುವುದಾಗಿದೆ. ರಾಮಾಯಣ, ಮಹಾಭಾರತಗಳ ಕಾಲದಿಂದಲೂ ದುಷ್ಟಶಿಕ್ಷೆ– ಶಿಷ್ಟರಕ್ಷೆ ಚಾಲ್ತಿಯಲ್ಲಿದೆ. ದುಷ್ಟತೆ–ಶಿಷ್ಟತೆಗಳೆರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಶಿಷ್ಟತೆಗಿಂತಲೂ ದುಷ್ಟತೆ ಅಧಿಕ ಪ್ರಮಾಣದಲ್ಲಿದೆ. ಸಮಾಜದಲ್ಲಿ ಒಳ್ಳೆಯವರು ಇದ್ದಂತೆ ಕೆಟ್ಟವರು ಇರುತ್ತಾರೆಂಬುದು ಸತ್ಯಸಂಗತಿಯಾಗಿದೆ. ಆದರೆ ಒಳ್ಳೆಯವರಿಂದ ಯಾವುದೇ ಕಳಂಕಗಳು ಉದ್ಭವಿಸುವುದಿಲ್ಲ. ಕೆಟ್ಟವರಿಂದ ಮಾತ್ರ ಕಳಂಕಗಳು ಉಲ್ಬಣವಾಗಿ ಸಮಾಜವನ್ನು ಹದಗೆಡಿಸುತ್ತವೆ. ಜನಪದರು ಜನಪದ ಮಹಾಕಾವ್ಯಗಳಲ್ಲಿ ಹಲವು ಪಾತ್ರಗಳ ಮುಖಾಂತರ ದುಷ್ಟಶಿಕ್ಷೆ ಶಿಷ್ಯರಕ್ಷೆಯನ್ನು ಅಭಿವ್ಯಕ್ತಿಪಡಿಸಿ ಶಿಷ್ಟತನಕ್ಕೆ ಹೆಚ್ಚಿನ ಮಾನ್ಯತೆಯನ್ನು ನೀಡಿದ್ದಾರೆ. ಮಲೆಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪ ಕಾವ್ಯ ಹಾಗೂ ಮೈಲಾರಲಿಂಗನ ಕಾವ್ಯಗಳಲ್ಲಿನ ದುಷ್ಟಶಿಕ್ಷೆ–ಶಿಷ್ಟರಕ್ಷೆಯ ಸಂದರ್ಭಗಳು ಬಹಳ ವೈಶಿಷ್ಟ್ಯತೆಯಿಂದ ಕೂಡಿದೆ.*

**Keywords:** *ದುಷ್ಟ ಶಿಕ್ಷೆ–ಶಿಷ್ಟ ರಕ್ಷಣೆ, ಜನಪದ ಮಹಾಕಾವ್ಯ, ಮಲೆಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪ ಕಾವ್ಯ, ಮೈಲಾರಲಿಂಗನ ಕಾವ್ಯ.*

## ಪೀಠಿಕೆ

ಜನಪದ ಮಹಾಕಾವ್ಯಗಳ ನಾಯಕರೆಲ್ಲರೂ ಸಮಾಜದಲ್ಲಿ ಶಿಷ್ಟತೆಯನ್ನು ಉಳಿಸುವ ಸಲುವಾಗಿ ದುಷ್ಟರನ್ನು ಸರ್ವನಾಶ ಮಾಡುತ್ತಾರೆ. ಸರ್ವಸಾಮಾನ್ಯವಾಗಿ ನಾಯಕರು ಒಕ್ಕಲನ್ನಾಗಿ ಮಾಡಿಕೊಳ್ಳುವ ಸಂದರ್ಭಗಳಲ್ಲಿ ತಮಗೆ ಒಕ್ಕಲಾಗದೇ ಪ್ರತಿಭಟಿಸಿದವರನ್ನು ಸರ್ವನಾಶಮಾಡುತ್ತಾರೆ. ಕೆಲವೊಮ್ಮೆ ದುಷ್ಟರಲ್ಲಿನ ದುಷ್ಟತನವನ್ನು ನಾಶಮಾಡಿ ಅವರನ್ನು ಶಿಷ್ಯರನ್ನಾಗಿಯೂ ಮಾಡುವುದುಂಟು, ಆದರೆ ನಾಯಕರಲ್ಲಿ ಸ್ತ್ರೀಪುರುಷರೆಂಬ ಭೇದಭಾವವಿಲ್ಲ. ಹಾಗಾಗಿ ದುಷ್ಟರೆನಿಸಿದರೆ ಸಾಕು ಅಂಥಹವರನ್ನು ಸದೆಬಡಿದು ನಾಶಮಾಡಿಯೇ ತೀರುತ್ತಾರೆ. ನಾಯಕರಿಗೆ ದುಷ್ಟಶಿಕ್ಷೆ–ಶಿಷ್ಟರಕ್ಷಣೆ ಮಾಡುವುದು ಪರಮಗುರಿಯಿದ್ದಂತೆ ತೋರುತ್ತದೆ.

ಮಲೆಮಾದೇಶ್ವರ ಕಾವ್ಯ, ಮಂಟೇಸ್ವಾಮಿ ಕಾವ್ಯ, ಜುಂಜಪ್ಪ ಕಾವ್ಯ ಹಾಗೂ ಮೈಲಾರಲಿಂಗನ ಕಾವ್ಯಗಳಲ್ಲಿ ದುಷ್ಟಶಿಕ್ಷೆ–ಶಿಷ್ಟರಕ್ಷಣೆಯ ಪರಿಪಾಲನೆಗೆ ಬಹಳ ಮುಖ್ಯವಾದ ಪ್ರಾಧಾನ್ಯತೆಯಿದೆ. ಇಲ್ಲಿನ ಮಾದಪ್ಪ, ಮಂಟೇಸ್ವಾಮಿ, ಜುಂಜಪ್ಪ ಹಾಗೂ ಮೈಲಾರರೆಂಬ ಮಹಾನ್ ನಾಯಕರು ಸಮಾಜದಲ್ಲಿರುವ ದುಷ್ಟತನಗಳನ್ನು, ದುಷ್ಟಶಕ್ತಿಗಳನ್ನು ದಮನ ಮಾಡಲು ಬರುವಂತಹವರು. ದುಷ್ಟರನ್ನು ಸದೆಬಡಿಯುವ ಮೂಲಕ ಸಮಾಜದಲ್ಲಿ

***Please cite this article as:*** ಲಕ್ಷ್ಮಿನರಸಮ್ಮ. (2024). ಕನ್ನಡ ಜನಪದ ಮಹಾಕಾವ್ಯಗಳಲ್ಲಿ ದುಷ್ಟ ಶಿಕ್ಷೆ–ಶಿಷ್ಟ ರಕ್ಷಣೆಯ ಅನುಸರಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 40–47

ಮಾನವೀಯ ಮೌಲ್ಯಗಳನ್ನು ಉಳಿಸುತ್ತಾರೆ. ಈ ಎಲ್ಲಾ ಕಾವ್ಯಗಳಲ್ಲೂ ದುಷ್ಟರ ನಾಶ, ಶಿಷ್ಟರ ಉಳಿವು ಕಂಡುಬಂದಿದೆ. ಇಲ್ಲೆಲ್ಲಾ ದುಷ್ಟ–ದುಷ್ಟೆಯರು ಇದ್ದಂತೆ ದುಷ್ಟ ಶಕ್ತಿಗಳೂ ಇವೆ. ಅವುಗಳನ್ನು ಸಹ ಕಾವ್ಯದ ನಾಯಕರು ದಮನ ಮಾಡುತ್ತಾರೆ. ಇಲ್ಲದೇ ಹೋದರೆ ಆ ದುಷ್ಟಶಕ್ತಿಗಳೇ ಶಿಷ್ಟರನ್ನು ನಾಶಮಾಡುವ ಹಂತಕ್ಕೆ ಹೋಗುವುದು, ಮಾದೇಶ್ವರ ಶ್ರವಣದೊರೆಯನ್ನು ನಾಶಮಾಡುವ ಹಂತಕ್ಕೆ ಹೋಗುತ್ತವೆ. ಮಾದೇಶ್ವರ ಶ್ರವಣದೊರೆಯನ್ನು ಬಗ್ಗುಬಡಿಯುವುದು, ಬೇವಿನಟ್ಟಿ ಕಾಳಮ್ಮಳನ್ನು ನಾಶಮಾಡುವುದು, ಸಂಕಮ್ಮ–ನೀಲಯ್ಯರನ್ನು ರಕ್ಷಿಸುವುದು, ಮೂಗಪ್ಪನಾದ ಸರಗೂರಪ್ಪನನ್ನು ಮೂಗಮ್ಮಳಾದ ರಾಮವ್ವಳನ್ನು ರಕ್ಷಿಸುವುದು, ಮಂಟೇಸ್ವಾಮಿಯು ಕೆಂಪಾಚಾರಿಯನ್ನು ಪಾಂಚಾಳ ದೊರೆಗಳನ್ನು ಶಿಕ್ಷೆಗೆ ಗುರಿಮಾಡುವುದು, ಬೊಪ್ಪೇಗೌಡ, ಮುದ್ದಮ್ಮರನ್ನು ರಕ್ಷಿಸುವುದು, ಜುಂಜಪ್ಪನು ಸೋದರಮಾವಂದಿರಾದ ಕಂಬೇರಗೊಲ್ಲರನ್ನು ಸರ್ವನಾಶಗೈಯುವುದು, ತಾಳೇ ದುರ್ಗಿಯನ್ನು ದಮನ ಮಾಡುವುದು, ಸಿನ್ನಮ್ಮಳನ್ನು ಕಾಪಾಡುವುದು, ದೊಡ್ಡಕ್ಕಜಿಯನ್ನು ಶಿಕ್ಷಿಸಿ ಪ್ರಾಣಹೋಗುವಂತೆ ಮಾಡುವುದು, ಹಾಗೂ ಮೈಲಾರಲಿಂಗ ಗಸ್ತಿಯವರನ್ನೆಲ್ಲಾ ನಾಶಮಾಡಿ ಕೋಮಾಲೆಯನ್ನು ಪಡೆಯುವುದು ಈ ಮೊದಲಾದ ಘಟನಾ ಸಂದರ್ಭಗಳು ದುಷ್ಟಶಿಕ್ಷೆ–ಶಿಷ್ಟರಕ್ಷೆಗೆ ಸಂಬಂಧಪಟ್ಟ ಪ್ರಸಂಗಗಳಾಗಿವೆ. ಅಧ್ಯಯನದ ಸಲುವಾಗಿ ಮೊದಲು ದುಷ್ಟಶಿಕ್ಷೆಯನ್ನು ತುಲನಾತ್ಮಕವಾಗಿ ವಿವೇಚಿಸಿ ಆ ನಂತರ ಶಿಷ್ಟರಕ್ಷಣೆಯ ಬಗ್ಗೆ ತುಲನಾತ್ಮಕವಾಗಿ ಹಲವು ವಿಚಾರಗಳನ್ನು ಮಂಡಿಸುತ್ತೇನೆ. ಇಲ್ಲಿ ಮುಖ್ಯವಾಗಿ ದುಷ್ಟರ ನಾಶವೇ ಮೊದಲ ಗುರಿಯಾಗಿದ್ದು, ಶಿಷ್ಟರನ್ನು ರಕ್ಷಿಸುವುದು ಆನಂತರದ ಗುರಿಯಾಗಿರುತ್ತದೆ.

ಮಲೆಮಾದೇಶ್ವರ ಕಾವ್ಯದಲ್ಲಿ 'ಬೇವಿನ್ನಟ್ಟಿ ಕಾಳಮ್ಮನ ಸಾಲು' ಎಂಬ ಭಾಗದಲ್ಲಿ ಬೇವಿನಟ್ಟಿ ಕಾಳಮ್ಮ ಮಹಾದುಷ್ಟೆಯಾಗಿದ್ದಾಳೆ. ಇವಳಿಗೆ ಎಳ್ಳನ್ನು ಮಾದಪ್ಪನಿಗೆ ದಾನ ಮಾಡುವ ಗುಣವಿಲ್ಲದೆ ಹಿಂಜರಿಯುವ ಇವಳಿಗೆ ತನ್ನ ಅಧಿಕಾರವನ್ನು ಸ್ಥಾಪಿಸುವ ಗುರಿಯಿದ್ದು, ಸೊಸೆಯರನ್ನು ಬಹಳ ಹಿಂಸಿಸುತ್ತಾಳೆ. ನೊಣಕ್ಕೆ ಅಂಟಿರುವರಾಗಿ ಅಂಬಳಿಯನ್ನು ಚೀಪುತ್ತಾಳೆ ಅಂದರೆ ಅವಳು ಜಿಪುಣತನಕ್ಕೆ ಮೇಧಾವಿಯಾಗಿದ್ದಾಳೆ. ಭಿಕ್ಷುಕರು ಮನೆಬಾಗಿಲಿಗೆ ಬಂದರೆ ಅವರನ್ನು ಓಡಿಸಿಕೊಂಡು ಹೋಗುತ್ತಾಳೆ. ಕಾಳಮ್ಮ ಮಾದಪ್ಪನಿಂದ ಸಕಲ ಸಂಪತ್ತನ್ನು ಪಡೆದರೂ ಲೆಕ್ಕಿಸದೇ ಮಾದಪ್ಪನನ್ನೇ ಮನಬಂದಂತೆ ಬಯ್ದು ಎಳ್ಳಿನ ಭಿಕ್ಷೆಯನ್ನು ಕೊಡುವುದಿಲ್ಲವೆಂದು ಹಠವಿಡಿಯುತ್ತಾಳೆ. ಇಂತಹವಳು ಬಡವರ ಪರವಾಗಿಲ್ಲವೆಂದು, ದಾನಮಾಡುವ ಗುಣವಿಲ್ಲವೆಂದು, ಶರಣಾಗತ ಭಾವವಿಲ್ಲವೆಂದು ಅವಳನ್ನು ಭೂಮಿ ಮೇಲೆ ಉಳಿಸಲೇಬಾರದೆಂದು ಮಾದಪ್ಪ ನಿರ್ಧರಿಸಿ ಶಿಕ್ಷೆ ನೀಡುವುದಕ್ಕೆ ಮುಂದಾಗುತ್ತಾರೆ. ಮೊದಲು ಮಾದಪ್ಪ ಕಾಳಮ್ಮಳ ಏಳೇಳು ಹದಿನಾಲ್ಕು ಹಟ್ಟಿಯನ್ನು ಬೂದಿಯಿಂದ ಸುಟ್ಟು ಭಸ್ಮಮಾಡುತ್ತಾರೆ. ನಂತರ ಕಾಳಮ್ಮಳ ಮುಂದೆ ಮೇಲೆ ಭಸ್ಮ ಹಾಕಿ ಸುಟ್ಟು ಹಾಕುತ್ತಾರೆ. ಹೀಗೆ ಮಾದೇಶ್ವರ ಕಾಳಮ್ಮಳ ದುರಾಹಂಕಾರಕ್ಕೆ ಪೂರ್ಣ ವಿರಾಮವನ್ನು ಇಡುತ್ತಾರೆ. ಮಾದಪ್ಪನಿಗೆ ಹೆಣ್ಣೆಂಬ ಕರುಣೆಯಿದ್ದರೂ ಅದನ್ನು ಉಳಿಸಿಕೊಳ್ಳದ ಕಾಳಮ್ಮಳ ದುಷ್ಟತನವನ್ನು ಕೊನೆಗಾಣಿಸುತ್ತಾರೆ. ಕಾಳಮ್ಮಳಂತೆ ದುಷ್ಟತನದಿಂದ ನಡೆಯುವವಳು ಯಾರೆಂದರೆ ಜುಂಜಪ್ಪ ಕಾವ್ಯದ ದೊಡ್ಡಕ್ಕಜ್ಜಿ ಜುಂಜಪ್ಪನ ಕಾವ್ಯದ ದೊಡ್ಡಕ್ಕಜ್ಜಿ ಜುಂಜಪ್ಪನ ಅಜ್ಜಿಯೂ ಆಗಿದ್ದಾಳೆ ಜುಂಜಪ್ಪ ಬಡತನದಿಂದ ತತ್ತರಿಸಿದ್ದು, ದೀಪಾವಳಿ ಹಬ್ಬ ಮಾಡುವುದಕ್ಕಾಗಿ ದೊಡ್ಡಕ್ಕಜ್ಜಿಯಲ್ಲಿ ಅವುರೆಕಾಯಿಯನ್ನು ತರುವಂತೆ ಮಾರಣ್ಣ–ಮೈಲಾರಣ್ಣರಲ್ಲಿ ಹೇಳಿ ಕಳುಹಿಸುತ್ತಾನೆ. ಆದರೆ ದೊಡ್ಡಕ್ಕಜ್ಜಿಯೂ ಕಾಳಮ್ಮಳಂತೆ ದುಷ್ಟ ಬುದ್ಧಿಯುಳ್ಳವಳು, ಅವಳು ಅವರಿಗೆ ಅವುರೆಯನ್ನು

ದೇವರಿಗೆ ಮೀಸಲಿರಿಸಿದ್ದುದರಿಂದ ಸೋಮವಾರ ಬರಬೇಕೆಂದು ತಿಳಿಸುತ್ತಾಳೆ. ಅವರು ಹೋಗದಿದ್ದಾಗ ಬಯ್ಯುತ್ತಾಳೆ. ಇದರಿಂದಾಗಿ ಜುಂಜಪ್ಪ ಅವುರೆ ಪಡೆಯಲು ಜಂಗಮ, ಜೋಗಿ, ದಾಸಯ್ಯ ವೇಷಿಯಾಗಿ ಹೋದಾಗಲೂ ದೊಡ್ಡಕ್ಕಜ್ಜಿ ಅವುರೆಯನ್ನು ನೀಡದೆ ಜುಂಜಪ್ಪನನ್ನು ಕುರಿತು

*"ಎಲೋ ಜುಂಜಪ್ಪ*
*ಕಂಡೆನಾ ನಿನ್ನ ನಾನಾ ಮಾಯಿಗಳೆಲ್ಲ*
*ದಾಸಯ್ಯನಾಗಿ ಬಂದೆ*
*ಜಂಗುಮೈನಾಗಿ ಬಂದೆ*
*ಜೋಗಯ್ಯನಾಗಿ ಬಂದೆ*
*ಯಾವ ಮಾಯಿಗಳೆತ್ತಿದ್ರು*
*ನಿನಗೆ ಅವುರೆ ಕಾಯಿ ಕೊಡುದಿಲ್ಲ"*

ಎಂಬುದಾಗಿ ದುಷ್ಟತನದ ಮಾತುಗಳನ್ನು ಆಡುತ್ತಾಳೆ. ಬಡವರಿಗೆ, ಸಂಬಂಧಿಕರಿಗೆ ಕರುಣೆ ತೋರಿಸದ ದೊಡ್ಡಕ್ಕಜ್ಜಿಯನ್ನು ಉಳಿಸಲೇಬಾರದೆಂದು ಜುಂಜಪ್ಪ ನಿರ್ಧರಿಸಿ, ಸ್ವತಃ ತನ್ನಿಂದ ದೊಡ್ಡಕ್ಕಜ್ಜಿಯ ಪ್ರಾಣ ಹೋಗದಂತೆ ಎಚ್ಚರಿಕೆಯಿಂದಾಗಿ ವಿಷದ ನಾಗರಾವಿನ ಮೂಲಕ ಅವಳ ಪ್ರಾಣವನ್ನು ಹೋಗುವಂತೆ ಮಾಡುತ್ತಾನೆ. ಏಕೆಂದರೆ ಜುಂಜಪ್ಪನಿಗೆ ಹತ್ಯೆಗಳು ಆಗುವುದಿಲ್ಲ. ಮಾದೇಶ್ವರನು ಕಾಳಮ್ಮಳನ್ನು ಸರ್ವನಾಶ ಮಾಡಿದಂತೆ ಜುಂಜಪ್ಪನೂ ಸಹ ದೊಡ್ಡಕ್ಕಜ್ಜಿಯನ್ನು ಅವುರೆಯನ್ನು ಕೊಡದ ಕಾರಣವಾಗಿ ದಮನಮಾಡಿ ನಾಶಮಾಡುತ್ತಾನೆ. ನಾಯಕರಿಗೆ ಯಾರು ಶರಣಾಗಿ ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಾರೋ ಅಂತಹವರನ್ನು ಮಾತ್ರ ಉಳಿಸುತ್ತಾರೆಂಬುದು ಈ ಮೇಲಿನ ಪ್ರಸಂಗಗಳಿಂದ ತಿಳಿದುಬರುತ್ತದೆ. ಕಾಳಮ್ಮ, ದೊಡ್ಡಕ್ಕಜ್ಜಿಯಂತೆ ದುಷ್ಟನಾದವನು ಮುದ್ದಮ್ಮಳ ಮಗನಾದ ಕೆಂಪಾಚಾರಿ, ಈತ ಕುಲುಮೆ ಮನೆಯಲ್ಲಿ ಕಬ್ಬಿಣದ ಕೆಲಸ ಮಾಡುವವನು, ಈತನಲ್ಲಿ ಬೆಂಕಿ ಕೆಂಡವನ್ನು ಪಡೆದು ಒಕ್ಕಲನ್ನಾಗಿ ಸ್ವೀಕರಿಸಲು ಮಂಟೇಸ್ವಾಮಿಗಳು ಕೆಂಪಾಚಾರಿಯಲ್ಲಿಗೆ ಬರುತ್ತಾರೆ. ಆದರೆ ಕೆಂಪಾಚಾರಿ ಕಬ್ಬಿಣ ಕೆಂಡವನ್ನು ನೀಡಲು ನಿರಾಕರಿಸುತ್ತಾನೆ. ಕೆಂಡವನ್ನು ಮಾತ್ರ ನೀಡಲಾರೆ ಎನ್ನುತ್ತಾನೆ. ಇಂದಿನ ಸಮಾಜದಲ್ಲಿ ಕೆಲವು ಹಠಮಾರಿಗಳು ಹಠವನ್ನು ಬಿಡದೇ ಪ್ರಾಣವನ್ನು ಸಹ ಗಣನೆಗೆ ತೆಗೆದುಕೊಳ್ಳದೇ ಧಿಕ್ಕರಿಸಿರುವುದು ಗಮನಾರ್ಹ, ಕಾಳಮ್ಮ, ದೊಡ್ಡಕ್ಕಜ್ಜಿಯವರ ಪ್ರಾಣವನ್ನು ನಾಯಕರು ತೆಗೆಯುತ್ತಾರೆ. ಆದರೆ ಮಂಟೇಸ್ವಾಮಿಗಳು ಕೆಂಪಾಚಾರಿಯನ್ನು ಶಿಕ್ಷಿಸುತ್ತಾನೆಯೇ ವಿನಃ ಪ್ರಾಣವನ್ನು ತೆಗೆಯುವುದಿಲ್ಲ. ಕೆಂಪಾಚಾರಿಯನ್ನು ಕಾಳಿಂಗ ಗುಹೆಯಲ್ಲಿ ಹಾವು–ಚೇಳುಗಳೊಂದಿಗೆ ಕೂಡಿ ಹಾಕಿ ಹನ್ನೆರಡು ವರ್ಷಗಳ ಕಾಲ ಶಿಕ್ಷೆ ನೀಡುತ್ತಾರೆ. ಈ ಶಿಕ್ಷೆಯಿಂದಾಗಿ ಕೆಂಪಾಚಾರಿಯ ಅಹಂಕಾರ ಕಡಿಮೆಯಾದರೂ ಹಠ ನಾಶವಾಗುವುದಿಲ್ಲ. ಕೆಂಪಾಚಾರಿಯೂ ಕಾಳಮ್ಮನಂತೆಯೇ ದರ್ಪವನ್ನು ಉಳ್ಳವನು. ಇವನು ಮಂಟೇಸ್ವಾಮಿಗೆ ಸವಾಲು ಹಾಕುವ ಗುಣವನ್ನು ಹೊಂದಿದ್ದು, ತಾನು ಗುರುವೆಂದು ಮಂಟೇಸ್ವಾಮಿ ಶಿಷ್ಯನೆಂದು ನಿರ್ಧರಿಸುತ್ತಾನೆ. ಇವನು ಮಂಟೇಸ್ವಾಮಿಯ ಎರಡು ಅಂಗೈಯಲ್ಲಿ ಬೆಂಕಿ ಕೆಂಡವನ್ನು ಇಟ್ಟನು. ಆದರೆ ಮಂಟೇಸ್ವಾಮಿ ಪವಾಡ ಪುರುಷನಾಗಿದ್ದರಿಂದ ಅಂಗೈಯಲ್ಲಿನ ಬೆಂಕಿ ಕೆಂಡವನ್ನು ಪುಷ್ಪವನ್ನಾಗಿ ಪರಿವರ್ತಿಸುತ್ತಾನೆ. ಕೆಂಪಾಚಾರಿಯನ್ನು ಶಿಕ್ಷಿಸಿದರೆ ಮಾತ್ರ ಒಕ್ಕಲನ್ನಾಗಿ ಪಡೆಯಬಹುದೆಂದು ಅರಿತು ಗುಹೆಯೊಳಗೆ ಕೂಡಿಹಾಕುತ್ತಾರೆ. ಅವನಿಗೆ ಜನಿವಾರಗಳನ್ನೆಲ್ಲಾ ತೆಗೆದು 'ಸಿದ್ದಾಪ್ಪಾಜಿ' ಎಂದು ನಾಮಕರಣ ಮಾಡುತ್ತಾರೆ. ಮುಂದೆ ಮಂಟೆಸ್ವಾಮಿಗಳು ಸಿದ್ದಾಪ್ಪಾಜಿಯನ್ನು ಪಾಂಚಾಳರಲ್ಲಿ ಕಬ್ಬಿಣದ ಭಿಕ್ಷೆಯನ್ನು ಪಡೆಯಲು ಪಂಚಾಳರಲ್ಲಿಗೆ ಒತ್ತಾಯಪೂರ್ವಕವಾಗಿ ಕಳುಹಿಸುತ್ತಾರೆ. ಕಾಳಮ್ಮ ದೊಡ್ಡಕ್ಕಜ್ಜಿ ಕೆಂಪಾಚಾರಿ ಈ ಮೂರು ಜನ ಹಠಮಾರಿಗಳೆಂದು ಪರಿಗಣಿಸಬಹುದು. ಇವರಗಳು ಭಿಕ್ಷೆ ನೀಡದೇ ನಾಯಕರ ಶಿಕ್ಷೆಗಳಿಗೆ ಒಳಗಾದವರು. ನಾಯಕರಿಗೆ ದುಷ್ಟರನ್ನು ಸದೆಬಡಿದರೆ ಶಿಷ್ಟತೆ

ಉಳಿಯಲು ಅವಕಾಶವಾಗುತ್ತದೆ ಎಂಬ ದೃಢವಾದ ನಂಬಿಕೆ ಇದ್ದಂತೆ ತೋರುತ್ತದೆ.

ಮೈಲಾರನಿಗೆ ತನ್ನನ್ನು ಕೋಮಾಲೆಯ ಅರಮನೆಯೊಳಗೆ ಬಿಡಲಿಲ್ಲವೆಂದು ಶಿಕ್ಷೆಗಳಿಗೆ ಗುರಿಪಡಿಸದರೆ ಮಂಟೇಸ್ವಾಮಿಗೆ ತನ್ನ ಒಕ್ಕಲಾದ ಸಿದ್ದಾಪ್ಪಾಜಿ ಕಬ್ಬಿಣದ ಭಿಕ್ಷೆ ನೀಡದ ಪಂಚಾಳರ ದೊರೆಗಳನ್ನು ಹಲವು ಶಿಕ್ಷೆಗಳಿಗೆ ಒಳಪಡಿಸುತ್ತಾರೆ. ಆದರೆ ಇಲ್ಲಿನ ದುಷ್ಟ ಶಿಕ್ಷೆಯು ಪ್ರಸಂಗಗಳು ವಿಭಿನ್ನತೆಯಿಂದ ಕೂಡಿವೆ. ಶಿಕ್ಷೆ ನೀಡುವ ಮನೋಧರ್ಮ ಒಂದೇ ಎನಿಸಿದೆ. ಮೈಲಾರನು ಹನ್ನೆರಡು ಮಣ ತಂಬಾಕನ್ನು ಚಿಲುಮೆಗೆ ತುಂಬಿಸಿ ಹೊಗೆಬಿಟ್ಟು ಗಸ್ತಿಯವರನ್ನೆಲ್ಲಾ ಮೂರ್ಛೆಗೊಳಿಸಿ, ಅವರ ಗಡ್ಡ ಮೀಸೆಗಳನ್ನು ಗಂಟುಹಾಕುತ್ತಾನೆ. ಕುರುಬರಿಗೆ ಆ ಗಂಟುಗಳನ್ನು ಬಿಚ್ಚುವುದಕ್ಕೆ ಅಸಾಧ್ಯವಾಗುತ್ತದೆ. ಕೊನೆಗೆ ಮೈಲಾರನೇ ಗಸ್ತಿಯವರ ಗಡ್ಡಮೀಸೆಗಳನ್ನು ಗಂಟುಗಳನ್ನು ಬಿಚ್ಚಿದರೆ, ಗಸ್ತಿಯವರೆಲ್ಲಾ ಕರ್ನಾಗುಂಡು ಹುಣಸೆ ಬರ್ಲುವಿನಿಂದ ಮೈಲಾರನನ್ನು ಹೊಡೆಯುತ್ತಾರೆ. ಆ ಏಟುಗಳೆಲ್ಲಾ ಮಲ್ಲಯ್ಯನಿಗೆ ಬೀಳದೇ ಗಸ್ತಿಯವರಿಗೆ ಬೀಳುತ್ತದೆ. ಇದರಿಂದ ಗಸ್ತಿಯವರೆಲ್ಲ ಶಿಕ್ಷೆಗಳಿಂದಾಗಿ ಮೈಲಾರನಿಗೆ ಶರಣಾಗುತ್ತಾರೆ. ಆದರೆ ಮಂಟೇಸ್ವಾಮಿಯ ಪಂಚಾಳರ ಪ್ರಸಂಗ ಅದಕ್ಕಿಂತ ವಿಭಿನ್ನವಾಗಿದೆ. ಮಂಟೇಸ್ವಾಮಿಯು ಸಿದ್ದಾಪ್ಪಾಜಿಯನ್ನು ಕಬ್ಬಿಣದ ಭಿಕ್ಷೆ ತರುವಂತೆ ಪಾಂಚಾಲರಲ್ಲಿಗೆ ಕಳುಹಿಸಿದಾಗ ಪಾಂಚಲರು ನೇರವಾಗಿ ಕಬ್ಬಿಣದ ಭಿಕ್ಷೆ ನೀಡದೆ ಸಿದ್ದಾಪ್ಪಾಜಿ ಮತ್ತು ಮಂಟೇಸ್ವಾಮಿಗಳ ಶಕ್ತಿಯನ್ನು ಪರೀಕ್ಷಿಸಲು ಮುಂದಾಗುತ್ತಾರೆ. ಕಾದ ಆನೆಗಾತ್ರದ ಪಡುಗುಂಡಿನ ಮೇಲೆ ನಿಂತರೆ ಗುರುವಿನ ಸತ್ಯ ಅರಿತು ನಂತರ ಕಬ್ಬಿಣದ ಭಿಕ್ಷೆ ನೀಡುತ್ತೇವೆ ಎಂಬ ಸತ್ಯವನ್ನು ನೀಡುತ್ತಾರೆ. ಆಗ ಸಿದ್ದಾಪ್ಪಾಜಿ ಧರೆಗೆ ದೊಡ್ಡವರ ನೆನೆಯುತ್ತಾ ಪಡುಗುಂಡಿನ ಮೇಲೆ ನಿಂತಾಗ ಕಬ್ಬಿಣವೆಲ್ಲಾ ಕಾವಿ ನೀರಾಗುತ್ತದೆ. ಸಿದ್ದಾಪ್ಪಾಜಿಯ ಕಷ್ಟವನ್ನು ನೋಡಲಾಗದ ಮಂಟೇಸ್ವಾಮಿಗಳು ಮಾರಿಯರನ್ನು ಹಲಗೂರಿಗೆ ಪ್ರವೇಶಿಸಿ

***"ಅವರು ಬೀದಿಲಾಡೋ ಮಕ್ಕಳಿಗೆ***
***ಹುಣ್ಣುರೋಗ ಕೊಟ್ಟಾರಲ್ಲ"***
***ಅವರು ಹಾದಿಲಾಡೋ ಮಕ್ಕಳಿಗೆ***
***ಗ್ವಾರು ರೋಗ ಕೊಟ್ಟರಲ್ಲಾ"***
***"ಅವು ಲಾಲಿಲಾಡೋ ಮಕ್ಕಳು***
***ಲಾಲಿ ಒಳಗೆ ಸಾಯುತ್ತವೆ"***

ಎಂಬಂತೆ ಹಲಗೂರನ್ನು ಸರ್ವನಾಶಮಾಡುತ್ತಾರೆ. ಇದರಿಂದ ಕಂಗಾಲಾದ ಪಂಚಾಳ ದೊರೆಗಳು ಶಿಕ್ಷೆಯನ್ನು ತಾಳಲಾರದೇ ಕಬ್ಬಿಣದ ಭಿಕ್ಷೆ ನೀಡಿ ಶರಣಾಗುತ್ತಾರೆ. ಇಲ್ಲಿ ಪಾಂಚಾಳರಿಗೆ ಶಿಕ್ಷೆ ನೀಡಲು ನಾಯಕನಾದ ಮಂಟೇಸ್ವಾಮಿ ಮಾರಿಯರನ್ನು ಬಳಸಿಕೊಂಡರೆ ಮೈಲಾರನು ತಾನು ನೇರವಾಗಿ ಗಸ್ತಿಯವರನ್ನು ನಾಶಮಾಡುತ್ತಾನೆ. ಅಂದರೆ ಇವರಿಬ್ಬರು ಶಿಕ್ಷೆ ನೀಡುವುದರೊಂದಿಗೆ ಗಸ್ತಿಯವರನ್ನು ಪಾಂಚಾಳರನ್ನು ದುಷ್ಟತನಗಳಿಂದ ಬಿಡುಗಡೆಗೊಳಿಸುತ್ತಾರೆ. ಇವರೆಲ್ಲಾ ಸಾಮಾನ್ಯ ಮನುಷ್ಯರಾಗಿರುವ ದುಷ್ಟರು ಅಷ್ಟೇ. ನಾಯಕರನ್ನೇ ನಾಶ ಮಾಡಲು ಹೊರಟಿರುವ ದುಷ್ಟ ದೈತ್ಯಶಕ್ತಿಗಳು ಜನಪದ ಮಹಾಕಾವ್ಯಗಳಲ್ಲಿ ಕಾಣಬರುತ್ತಾರೆ. ಅವರೇ ಜುಂಜಪ್ಪ ಕಾವ್ಯದಲ್ಲಿ ತಾಳೇದುರ್ಗಿ ಮತ್ತು ಮಂಟೇಸ್ವಾಮಿ ಕಾವ್ಯದಲ್ಲಿನ ಕಾಳಿಕಾದೇವಿ. ಮಲೆಮಾದೇಶ್ವರ ಕಾವ್ಯದಲ್ಲಿನ ಶ್ರವಣದೊರೆ ಬಹಳ ಅಹಂಕಾರಿಯಾಗಿದ್ದು, ಮಾದಪ್ಪನನ್ನು ಚಮಾಳಿಗನನ್ನಾಗಿ ತಿಳಿದ ದುಷ್ಟ ದೊರೆಯಾಗಿದ್ದಾನೆ. ಇವರುಗಳು ಜನಪದ ಮಹಾಕಾವ್ಯಗಳಲ್ಲಿ ಅತ್ಯಂತ ದುಷ್ಟರಾಗಿದ್ದಾರೆ. ಇವರನ್ನು ದಮನ ಮಾಡುವುದೇ ನಾಯಕರ ಪರಮ ಗುರಿಯಾಗಿದೆ.

ತಾಳೆದುರ್ಗಿಯು ಜುಂಜಪ್ಪನ ಕಾವ್ಯದಲ್ಲಿ ಮಹಾದುಷ್ಟೆಯಾಗಿದ್ದು, ದನಗಳ ಬೆಳವಣಿಗೆಯನ್ನು ಸಹಿಸದ ಕಂಬೇರುಗೊಲ್ಲರು (ಸೋದರಮಾವಂದಿರು) ಜುಂಜಪ್ಪನನ್ನು ನುಂಗುವಂತೆ ತಾಳೆದುರಿಗೆ ತಿಳಿಸಿ

ತಮ್ಮನ್ನು ರಕ್ಷಿಸಬೇಕೆಂದು ಕೇಳಿಕೊಳ್ಳುತ್ತಾರೆ. ಅದರಂತೆ ತಾಳೇದುರ್ಗಿಯು ಜುಂಜಪ್ಪನನ್ನು ಜುಂಜಪ್ಪನನ್ನು ಜುಂಜಪ್ಪನ ದನಗಳನ್ನೆಲ್ಲಾ ನುಂಗಲು ಹವಣಿಸುತ್ತಿರುತ್ತದೆ. ಆಗ ದೇವತೆ ಎನಿಸಿರುವ ಪುರಳ್ಳಿ ಭೂತಪ್ಪ ಜುಂಜಪ್ಪನಿಗೆ ಸಹಾಯಕನಾಗಿ ನಿಂತು ತಾಳೇದುರಿಯನ್ನು ಸದೆಬಡಿಯುತ್ತಾನೆ. ತಾಳೇದುರಿ ಈಗಾಗಲೇ

***"ಅವಳು ಇರುಗೊಂದಿ ಪಟ್ಣ***
***ದುರ್ಗಿ ಪಟ್ಣ ಹಂಗೆ ಬಿಟ್ಟಂಬಿಟ್ಟು***
***ಸುತ್ತುಲ ಇರೋ ಪಟ್ಣುಗಳೊಳಗೆ ಇರಾ ಜನಗಳನ್ನ***
***ಇರ ದನಕರುಗಳನ್ನೆಲ್ಲಾ ನುಂಗಿ ನಾಶ ಮಾಡ್ತಾಕಿ ಬಿಟ್ಟವ್ಳೆ"***

ಎಂಬುದಾಗಿ ತಿಳಿದ ಪುರ್ಲಳ್ಳಿ ಭೂತಪ್ಪ ಭ್ರಷ್ಟಮುಂಡೆಯನ್ನು ನಾಶಮಾಡಲೇಬೇಕೆಂದು ನಿರ್ಧರಿಸಿ ಬಹಳ ಎತ್ತರಕ್ಕೆ ಬೆಳೆದು, ಮಾರಿಯರನ್ನೆಲ್ಲಾ ಇರುಗೊಂದಿಗೆ ನುಗ್ಗಿಸಿ ವಾಂತಿ, ಭೇದಿ ಮೂಲಕ ಎಲ್ಲರನ್ನು ಎಲ್ಲವನ್ನು ಧ್ವಂಸ ಮಾಡಿಸುತ್ತಾನೆ. ನಂತರದಲ್ಲಿ ಪುರ್ಲಳ್ಳಿ ಭೂತಪ್ಪ ಜುಂಜಪ್ಪನ ಪರವಾಗಿ ತಾಳೇ ದುರ್ಗಿಯೊಂದಿಗೆ ಪ್ರತಿಭಟಿಸಿ ಬಲಮುರಿ ದೊಣ್ಣೆಯಿಂದ ಅವಳ ಸೊಂಟಕ್ಕೆ ಹೊಡೆಯುತ್ತಾನೆ. ಮತ್ತೆ ಅದೇ ದೊಣ್ಣೆಯನ್ನು ಜಗ್ಗಿಸಿ ಹೊಡೆದಾಗ ತಾಳೇದುರ್ಗಿ ಮೂರು ತುಂಡುಗಳಾಗಿ ಬಿದ್ದು ಹೋಗುತ್ತಾಳೆ. ಹೀಗೆ ಪುರ್ಲಳ್ಳಿ ಭೂತಪ್ಪ ತಾಳೇದುರ್ಗಿಯನ್ನು ನಾಶಮಾಡುವುದರೊಂದಗೆ ದುಷ್ಟಶಕ್ತಿಯನ್ನು ಇಲ್ಲವಾಗಿಸುತ್ತಾನೆ. ಆದರೆ ಮಂಟೇಸ್ವಾಮಿ ಕಾವ್ಯದಲ್ಲಿ ಮಂಟೇಸ್ವಾಮಿಯು ಸಿದ್ದಾಪ್ಪಾಜಿಯ ಪರವಾಗಿ ನಿಂತು ದುಷ್ಟಶಕ್ತಿಯಾದ ಕಾಳಿಕಾದೇವಿಯನ್ನು ಸರ್ವನಾಶಮಾಡುತ್ತಾನೆ. ಇಲ್ಲಿ ಪಂಚಾಳ ದೊರೆಗಳು ಸಿದ್ದಾಪ್ಪಾಜಿಯವರ ಪವಾಡವನ್ನು (ಸತ್ಯ) ಅರಿಯಲು ಕಾಳಿಕಾದೇವಿ ಮಠದಲ್ಲಿ ಸಿದ್ದಾಪ್ಪಾಜಿಯನ್ನು ಕೂಡಿಹಾಕುತ್ತಾರೆ. ಸಿದ್ದಾಪ್ಪಾಜಿ ಕಾಳಿಕಾದೇವಿಯಿಂದ ಬಿಡುಗಡೆಯಾದಾಗ ಮಾತ್ರ ಕಬ್ಬಿಣದ ಭಿಕ್ಷೆ ನೀಡುವುದರೊಂದಿಗೆ ಒಕ್ಕಲಾಗುತ್ತೇವೆ ಎಂದು ಪ್ರಮಾಣ ಮಾಡುತ್ತಾರೆ. ಅದರಂತೆಯೇ ಸಿದ್ದಾಪ್ಪಾಜಿಯು ಕಣ್ಣು ಬಿಟ್ಟಿರುವ ಕಾಳಿಕಾ ದೇವಿಯನ್ನು ನೋಡಿ ಧರೆಗೆ ದೊಡ್ಡವರನ್ನು ಧ್ಯಾನಿಸಿ ತನ್ನನ್ನು ಕಾಳಿಕಾದೇವಿಯಿಂದ ಪಾರುಮಾಡುವಂತೆ ಕೇಳಿಕೊಂಡಿರುತ್ತಾನೆ. ನಿದ್ದೆಯಿಂದೆದ್ದ ಕಾಳಿಕಾದೇವಿಯು ಸಿದ್ದಾಪ್ಪಾಜಿಯನ್ನು ಕಂಡು ಹೊರಗೆ ಬರುತ್ತಾಳೆ. ಆಗ ತಕ್ಷಣವೇ ಸಿದ್ದಾಪ್ಪಾಜಿ ಎಡಗಾಲಿನಿಂದ ಅವಳನ್ನು ಒದ್ದೊಡನೆ ಅವಳು ನಡು ಬೀದಿಯಲ್ಲಿ ಬಿದ್ದೋಗುತ್ತಾಳೆ. ಅವಳನ್ನು ಸಂಹಾರ ಮಾಡುತ್ತಾನೆ. ಇದರಿಂದಲೂ ಪಂಚಾಳರು ಸಿದ್ದಾಪ್ಪಾಜಿ ಮತ್ತು ಮಂಟೇಸ್ವಾಮಿಗೆ ಶರಣಾಗುವುದಿಲ್ಲ. ಇಲ್ಲಿ ಮುಖ್ಯವಾಗಿ ದುಷ್ಟೆಯನ್ನು ಸರ್ವನಾಶ ಮಾಡಿರುವುದು ಸರಿಯಾಗಿದೆ. ಅಂದರೆ ದುಷ್ಟಶಕ್ತಿಗಳನ್ನು ನಾಶಮಾಡಬೇಕಾದರೆ ದೇವತೆಗಳ ಕೈಯಲ್ಲಿ ಮಾತ್ರ ಸಾಧ್ಯವಾಗುತ್ತದೆ. ಇಲ್ಲಿ ಮಂಟೇಸ್ವಾಮಿಯ ಮಹಿಮೆಯಿಂದ ಕಾಳಿಕಾದೇವಿ ಹತಳಾದರೆ ಜುಂಜಪ್ಪ ಕಾವ್ಯದಲ್ಲಿ ಜುಂಜಪ್ಪನಿಗೆ ಪವಾಡಶಕ್ತಿಯಿದ್ದರೂ ಸ್ತ್ರೀಹತ್ಯೆ ಮಾಡಬಾರದೆಂಬ ಉದ್ದೇಶದಿಂದ ಪುರಲ್ಲಿ ಭೂತಪ್ಪ ತಾಳೇದುರ್ಗಿಯನ್ನು ಸಂಹಾರಮಾಡುತ್ತಾನೆ. ದುಷ್ಟಶಕ್ತಿಯಿರುವಲ್ಲಿ ಶಿಷ್ಟರು ಬರುವುದಕ್ಕೆ ಸಾಧ್ಯವಿಲ್ಲವೆಂಬುದನ್ನು ಅರಿತು ಈ ರೀತಿ ದುಷ್ಟ ಶಕ್ತಿಗಳನ್ನು ಸರ್ವನಾಶ ಮಾಡುತ್ತಾರೆ.

ಮಲೆಮಾದೇಶ್ವರ ಕಾವ್ಯದಲ್ಲಿ ಅತ್ಯಂತ ಭ್ರಷ್ಟನಾದ ದೊರೆ ಶ್ರವಣದೊರೆ. ಈತನು ದೇವಾನುದೇವತೆಗಳನ್ನೆಲ್ಲಾ ತನ್ನ ಹತೋಟಿಯಲ್ಲಿಟ್ಟುಕೊಂಡಿರುತ್ತಾನೆ. ಇವನಿಂದ ದೇವತೆಗಳನ್ನು ಬಿಡುಗಡೆಗೊಳಿಸುವ ಸಲುವಾಗಿ ಮಾದೇಶ್ವರ ಶ್ರವಣದೊರೆಯು ರಾಜ್ಯಭಾರ ಮಾಡುವಾಗ ಅಲ್ಲಿಗೆ ಬರುತ್ತಾರೆ. ಆಗ ಶ್ರವಣದೊರೆಯು ಮಾದಪ್ಪನನ್ನು ಯಾರೆಂದು ಪ್ರಶ್ನಿಸಿದಾಗ ತಾನು 'ಉತ್ತರ ದೇಸದ ಮಾರಾರಿ' ಎಂಬುದಾಗಿ ಹೇಳಿದ್ದು ಅದು ಶ್ರವಣದೊರೆಗೆ 'ಮಾದಾರಿ' ಎಂಬಂತೆ ಕೇಳಿಸಿದ್ದರಿಂದ ಆಗ ಮಾದಪ್ಪ

ದುಷ್ಟ ಮಾದಪ್ಪನನ್ನು ಚಮಾಳಿಗೆಯನ್ನು ಮಾಡಿಕೊಡುವಂತೆ ಕೇಳುತ್ತಾನೆ. ಶ್ರವಣದೊರೆಯನ್ನು ಸದೆಬಡಿಯಲು ಸುಸಮಯವೆಂದು ತಿಳಿದು ಹರಳಪ್ಪನಿಂದ ಚಮಾಳಿಗೆಯನ್ನು ಸಿದ್ದಪಡಿಸಿ ಹುಟ್ಟರೆ ಕಲ್ಲಿನ ಮೇಲಿಟ್ಟು ಶ್ರವಣದೊರೆಯನ್ನು ಚಮಾಳಿಗೆಯನ್ನು ಮೆಟ್ಟುವಂತೆ ಮಾದಪ್ಪ ತಿಳಿಸುತ್ತಾರೆ. ಶ್ರವಣದೊರೆ ಬಿಗಿಯಾಗಿದ್ದ ಉಂಗುಷ್ಟವನ್ನು ಸರಿಮಾಡಲು ಬಗ್ಗಿದಾಗ ಬೆಂಕಿ ಧಗಧಗನೆ ಉರಿದು ಹೊಗೆಯಾಗುತ್ತದೆ. ಆ ಸಂದರ್ಭದಲ್ಲಿ ಶ್ರವಣದೊರೆಯನ್ನು ಸರ್ವನಾಶಮಾಡುವಲ್ಲಿ ಮಾದಪ್ಪ ಸಿದ್ದನಾಗಿ ತ್ರಿಶೂಲ ಹಿಡಿದು ಅವನ ಎದೆಯ ಮೇಲೆ ನಿಂತು ಕೊಲ್ಲುತ್ತಾನೆ. ಇಲ್ಲೆಲ್ಲಾ ನಾಯಕರೆಲ್ಲರ ಉದ್ದೇಶ ದುಷ್ಟಶಿಕ್ಷೆ–ಶಿಷ್ಟರಕ್ಷೆ ಎನ್ನುವುದು ಮಾತ್ರ ಸಾಮ್ಯಾತೆಯಿಂದ ಕೂಡಿದ್ದು, ಶಿಕ್ಷೆ ನೀಡುವಾಗ ಮಾತ್ರ ವಿಭಿನ್ನತೆಯ ಸಂದರ್ಭಗಳಿಂದ ಕೂಡಿವೆ. ಮಾದಪ್ಪ ಶ್ರವಣದೊರೆಯನ್ನು ಸದೆಬಡೆದದ್ದು ಜುಂಜಪ್ಪನ ಪರವಾಗಿ ಪುರ್ಲಳ್ಳಿ ಭೂತಪ್ಪ ತಾಳೇದುರ್ಗಿಯನ್ನು ಸಂಹಾರ ಮಾಡಿದ್ದು ಹಾಗೂ ಮಂಟೇಸ್ವಾಮಿ ಸಿದ್ದಾಪ್ಪಾಜಿಯನ್ನು ಉಳಿಸಲು, ಕಬ್ಬಿಣ ಭಿಕ್ಷೆ ಪಡೆಯುವ ಸಲುವಾಗಿ ಕಾಳಿಕಾದೇವಿಯನ್ನು ಸಂಹಾರ ಮಾಡಿದ್ದು, ದುಷ್ಟಶಿಕ್ಷೆಗೆ ಉದಾಹರಣೆಗಳಾದರೂ ಪ್ರಸಂಗಗಳು ನಡೆಯುವ ಕ್ರಿಯೆ, ಸ್ವರೂಪಗಳು ಬದಲಾವಣೆಗಳಿಂದ ಕೂಡಿವೆ ಎನ್ನಬಹುದು. ದುಷ್ಟಶಿಕ್ಷೆ–ಶಿಷ್ಟರಕ್ಷೆಯ ಸಂದರ್ಭಗಳಲ್ಲಿ ಅಷ್ಟಾಗಿ ಸಾಮ್ಯತೆಗಳು ಕಂಡುಬರುವುದಿಲ್ಲ. ಒಂದಕ್ಕೊಂದು ಪೂರಕವಾಗಿಲ್ಲ.

ಜುಂಜಪ್ಪ ಮಹಾಕಾವ್ಯದಲ್ಲಿ ಪ್ರಧಾನವಾಗಿ ದುಷ್ಟರೆನಿಸಿರುವ ಕಂಬೇರುಗೊಲ್ಲರಾದ ಜುಂಜಪ್ಪನ ಸೋದರ ಮಾವಂದಿರು, ತಮ್ಮ ತಂಗಿ ಸಿನ್ನಮ್ಮಳ ಬಾಳು ಚೆನ್ನಾಗಿರಲೆಂದು ಏಳು ಕರುಗಳನ್ನು ನೀಡಿರುತ್ತಾರೆ. ಈ ಕರುಗಳನ್ನು ಬೆಳೆಸಿ ಜುಂಜಪ್ಪ ಏಳು ಲಕ್ಷದ ದನಗಳನ್ನಾಗಿ ಅಭಿವೃದ್ಧಿ ಪಡಿಸುತ್ತಾನೆ. ಇದರಿಂದ ಕಂಬೇರುಗೊಲ್ಲರಿಗೆ ಅಸೂಯೆ ಉಂಟಾಗಿ ಜುಂಜಪ್ಪನನ್ನು ದ್ವೇಷಿಸಲು ಪ್ರಾರಂಭಿಸಿ, ಹಲವು ಮಾಟ–ಮಂತ್ರಗಳನ್ನು ಪಂಡಿತರಿಂದ ಮಾಡಿಸಿ ಜುಂಜಪ್ಪನ ದನಗಳ ಬೆಳವಣಿಗೆಯನ್ನು ಕುಂಠಿತಗೊಳಿಸಲು ಪ್ರಯತ್ನಿಸುತ್ತಾರೆ. ಕಂಬೇರುಗೊಲ್ಲರು ಎಂತಹ ಮಹಾದುಷ್ಟರೆಂದರೆ ತಂಗಿಯ ಬಾಳನ್ನು ಹಾಳು ಮಾಡಲು ಮುಂದಾಗಿ ಜುಂಜಪ್ಪನನ್ನು ಹತ್ಯೆ ಮಾಡಲು ನಾನಾ ರೀತಿಯಲ್ಲಿ ಅವನಿಗೆ ನಿದ್ರೆ ಬರುವಂತೆ ಅವನಂತೆ ಪ್ರತಿರೂಪವನ್ನು ಪಂಡಿತರಿಂದ ಮಾಡಿಸಿ ಜುಂಜಪ್ಪನಿಗೆ ಪ್ರಜ್ಞೆಯಿಲ್ಲದಂತೆ ಮಾಡುತ್ತಾರೆ. ಜುಂಜಪ್ಪನ ಬಡಮೈಲನನ್ನು ಸದೆ ಬಡಿಯುತ್ತಾರೆ. ಜುಂಜಪ್ಪನನ್ನು ಹೇಗಾದರೂ ಮಾಡಿ ಕೊನೆಗಾಣಿಸಬೇಕೆಂದು ವಿಷದ ಕಜ್ಜಾಯಗಳ ಊಟವನ್ನು ಬಡಿಸಲು ಅವನನ್ನು ತಮ್ಮ ಮನಗೆ ಆಹ್ವಾನಿಸುತ್ತಾರೆ. ಸೋದರಮಾವಂದಿರು ಜುಂಜಪ್ಪನಿಗೆ ಉರಿಮದ್ದಿನ ಪಾಯಸ, ವಿಷದ ಕಜ್ಜಾಯಗಳನ್ನು ನೀಡಿದ್ದುದರಿಂದ ಜುಂಜಪ್ಪ ಅವನ್ನು ತಿಂದು ಸಾಯುತ್ತಾನೆ. ಅಣ್ಣನಿಲ್ಲದ ಮೇಲೆ ತಾವಿರಬಾರದೆಂದು ಮಾರಣ್ಣ–ಮೈಲಣ್ಣರು ವಿಷದ ಕಜ್ಜಾಯಗಳನ್ನು ತಿಂದು ಪ್ರಾಣಬಿಡುತ್ತಾರೆ. ಇಂತಹ ದುರಂತಕ್ಕೆ ಕಾರಣರಾದ ಕಂಬೇರುಗೊಲ್ಲರೆಂಬ ಮಹಾದುಷ್ಟರನ್ನು ಭೂಮಿ ಮೇಲೆ ಇರಿಸಬಾರದೆಂದು ಈಶ್ವರನ ಆಜ್ಞೆಯಂತೆ ಜುಂಜಪ್ಪ ಮತ್ತೆ ಭೂಲೋಕಕ್ಕೆ ಬಂದು ಕಂಬೇರುಗೊಲ್ಲರನ್ನು ಹತ್ತಿಕ್ಕುವ ಸಲುವಾಗಿ ಅವರ ಹಟ್ಟಿಗೆ ಬೆಂಕಿ ಹಾಕಿ, ಉರಿಭಾಗವನ್ನು ಬಿಟ್ಟು ಸರ್ವನಾಶಮಾಡುತ್ತನೆ. ತನ್ನ ತಂಗಿ ಮಾರಕ್ಕಳು ಕಂಬೇರುಗೊಲ್ಲರು ಸೊಸೆಯೆಂಬುದನ್ನು ಲೆಕ್ಕಿಸದೇ ಜುಂಜಪ್ಪ ಸೋದರ ಮಾವಂದಿರನ್ನು ಸಂಪೂರ್ಣವಾಗಿ ಸರ್ವನಾಶ ಮಾಡುತ್ತಾನೆ. ಈ ಪ್ರಸಂಗವು ಸಂಬಂಧಿಕರ ದ್ವೇಷಕ್ಕೆ ಅನ್ವಯಿಸಿದ್ದು, ಇಡೀ ಕಾವ್ಯದ ಹರವಿಗೆ ಕಾರಣವಾಗುತ್ತದೆ. ಎಲ್ಲಾ ಜನಪದ ಮಹಾಕಾವ್ಯಗಳಲ್ಲಿ ಅತ್ಯಂತ ಮಹತ್ವಪೂರ್ಣವಾದ ಪ್ರಸಂಗ ಇದಾಗಿದೆ ಎನ್ನಬಹುದು.

ಇನ್ನುಳಿದ ಪಾತ್ರಗಳ ದುಷ್ಟ ಶಿಕ್ಷೆಯನ್ನು ದೀರ್ಘವಾಗಿ ಪ್ರಸ್ತಾಪ ಮಾಡುವುದಿಲ್ಲ. ಏಕೆಂದರೆ ಒಕ್ಕಲುಗಳ ಸಂದರ್ಭದಲ್ಲಿ ಅವುಗಳನ್ನು ಚರ್ಚಿಸಿದ್ದೇನೆ. ಹಾಗಾಗಿ ಸ್ವಲ್ಪ ಮಟ್ಟಿಗೆ ವಿಷಯ ಪ್ರಸ್ತಾಪ ಮಾಡಲಾಗಿದೆ. ಮಲೆಮಾದೇಶ್ವರ ಕಾವ್ಯದಲ್ಲಿನ ಡೊಳ್ಳೊಟ್ರೆ ಜುಂಜಪ್ಪ ಮಾದಪ್ಪನಿಗೆ ಗುಡಿಕಟ್ಟಿಸಲು ಹಿಂಜರಿದ್ದಾಗ ಮಾದಪ್ಪ ಬಸವಣ್ಣನಿಗೆ ಹಾಲು ತುಂಬಿಸಿ ಶಿಕ್ಷೆ ನೀಡುತ್ತಾನೆ. ಮಾದಪ್ಪನ ಪವಾಡಕ್ಕೆ ಹೆದರಿ ಡೊಳ್ಳೊಟ್ಟೆ ಜುಂಜಪ್ಪ ಶಿಷ್ಯನೆನಸಿಕೊಳ್ಳುತ್ತಾನೆ. ಮಂಟೇಸ್ವಾಮಿ ಕಾವ್ಯದಲ್ಲಿನ ಮಂಟೇಸ್ವಾಮಿಗಳು ರಾಚಪ್ಪಾಜಿಯ ಮೂಲಕ ಮೋಡಿಕಾರಿಗೆ ಜೋಳಿಗೆ ಎತ್ತುವ ಮೋಡಿಯನ್ನು ನೀಡಿ, ಅದರಲ್ಲಿ ಜೋಳಿಗೆಯನ್ನು ಎತ್ತಲಾಗದೇ ಸೋತು ಶರಣಾಗಿ ಶಿಷ್ಟರೆನಿಸಿಕೊಳ್ಳುತ್ತಾರೆ. ಮಲೆಮಾದೇಶ್ವರ ಕಾವ್ಯದಲ್ಲಿನ ಬೊಪ್ಪೇಗೌಡನ ಮಂಟೇಸ್ವಾಮಿಗೆ ಮಲಗುವುದಕ್ಕೆ ಕುರಿಕೊಟ್ಟಿಗೆಯನ್ನು ನೀಡಿದ್ದು, ಅದರಲ್ಲಿದ ಕುರಿಗಳನ್ನೆಲ್ಲಾ ಮಂಟೇಸ್ವಾಮಿ ಮಾಯ ಮಾಡಿದ್ದರಿಂದ ಬೊಪ್ಪೇಗೌಡನು ಮಂಟೇಸ್ವಾಮಿಗೆ ಶರಣಾಗಿ ಬೊಪ್ಪೇಗೌಡನ ಮನೆಯನ್ನು ಮಠದ ಮನೆಯನ್ನಾಗಿ ಮಾಡಿ ಬಿಟ್ಟುಹೋಗುತ್ತಾನೆ. ಮಲೆಮಾದೇಶ್ವರ ಕಾವ್ಯದಲ್ಲಿನ ನೀಲಯ್ಯ ಸಂಕಮ್ಮಳ ಮೇಲಿನ ಅನುಮಾನದಿಂದ ಅವಳನ್ನ ಚಿತ್ರಹಿಂಸೆಗಳಿಗೆ ಒಳಪಡಿಸಿದ್ದು, ಮಾದಪ್ಪನಿಂದ ಸಂಕಮ್ಮ ಸಕಲ ಸಂಪತ್ತನ್ನು ಪಡೆದು, ಮಕ್ಕಳಿಬ್ಬರನ್ನು ಪಡೆಯುವುದರೊಂದಿಗೆ ನೀಲಯ್ಯನಲ್ಲಿ ಮತ್ತಷ್ಟು ಅನುಮಾನಗಳು ಅಧಿಕವಾಗಲು ಕಾರಣವಾಗುತ್ತವೆ. ಇವರಿಬ್ಬರ ನಡುವಿನ ದಾಂಪತ್ಯವನ್ನು ಸರಿದೂಗಿಸಬೇಕೆಂದು ಮಾದಪ್ಪ ಸಂಕಮ್ಮಳಿಗೆ ಹಲವು ಪರೀಕ್ಷೆಗಳನ್ನು ನೀಡಿದ್ದು, ಅವುಗಳಲ್ಲಿ ಸಂಕಮ್ಮಳನ್ನು ಜಯಶೀಲೆಯನ್ನಾಗಿ ಮಾಡಿದ್ದರಿಂದ ನೀಲಯ್ಯನ ದುಷ್ಟತನದ ಭಾವನೆಗಳು ಪರಿವರ್ತನೆಯಾಗುತ್ತವೆ. ರಾಮವ್ವ ತನ್ನ ಗಂಡನಾದ ಸರಗೂರಪ್ಪನನ್ನು ಮಾದಪ್ಪನ ಅಚ್ಚೆಳ್ಳಿನ ಮಜ್ಜನಕ್ಕೆ ಒಕ್ಕಲನ್ನಾಗಿ ಕಳುಹಿಸಲು ಹಿಂಜರಿದಾಗ, ಅವರಿಬ್ಬರಿಗೆ ಸಂತೆಯಲ್ಲಿ ಸೊಪ್ಪನ್ನು ಮಾರಾಟ ಮಾಡದಂತೆ, ಬಡತನ ಪ್ರಾಪ್ತಿಯಾಗುವಂತೆ ಮಾಡಿದಾಗ ರಾಮವ್ವ ಸರಗೂರಪ್ಪನನ್ನು ಒಕ್ಕಲನ್ನಾಗಿ ಕಳುಹಿಸಲು ಸಿದ್ಧಳಾಗಿ ಶಿಷ್ಟರೆನಿಸಿಕೊಳ್ಳುತ್ತಾಳೆ.

ಮೈಲಾರಲಿಂಗನ ಕಾವ್ಯದಲ್ಲಿನ ಕೋಮಾಲೆಯ ಪಾತ್ರ ಅತ್ಯಂತ ವಿಶಿಷ್ಟತೆಯಿಂದ ಕೂಡಿದೆ. ಮೈಲಾರನು ಕೋಮಾಲೆಯನ್ನು ಪಡೆಯುವಲ್ಲಿ ಕುರಿಗಳನ್ನು ಮಾಯ ಮಾಡುವ ಮೂಲಕ ಕೋಮಾಲೆಯನ್ನು ಅವಳ ಅಣ್ಣಂದಿರಾದ ಕುರುಬರನ್ನು ತನ್ನನ್ನು ಒಪ್ಪುವ ಹಾಗೆ ಮಾಡುತ್ತಾನೆ. ಇದರಿಂದ ಕೋಮಾಲೆಯನ್ನು ಮಲ್ಲಯ್ಯನಿಗೆ ಕೊಡಲು ಸಿದ್ಧರಾದಾಗ ಕುರಿಗಳು ಮತ್ತೆ ಬದುಕಿ ಬರುತ್ತವೆ. ಈ ಎಲ್ಲಾ ಪ್ರಸಂಗಗಳಲ್ಲಿ ಸಾಮ್ಯತೆಗಳಿಲ್ಲದ ಕಾರಣ ಒಂದಕ್ಕೊಂದು ಪೂರಕವಾಗಿಲ್ಲ. ಆದರೆ ಅವರಲ್ಲಿನ ದುಷ್ಟ ಬುದ್ದಿಗಳನ್ನು ಹೋಗಲಾಡಿಸಿ ಶಿಷ್ಟತೆಯನ್ನು ಮೂಡಿಸಿ, ಶಿಷ್ಟರನ್ನು ಸಂರಕ್ಷಿಸುವ ಧೋರಣೆಗಳು ಮುಖ್ಯವಾಗಿವೆ. ಇವನ್ಯಾರು ಕೂಡ ನಾಯಕರಿಂದ ಕ್ರೂರವಾದ ಶಿಕ್ಷೆಗಳನ್ನು ಅನುಭವಿಸದೇ ನಾಯಕರ ಶಕ್ತಿ ಸಾಮಾರ್ಥಗಳನ್ನು ಅರ್ಥಮಾಡಿಕೊಂಡು ಭಕ್ತರಾಗಿ ಮುಂದುವರೆಯುತ್ತಾರೆ. ಇವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಶಿಷ್ಟರೇ ಆಗಿರುವುದು ಈ ಪ್ರಸಂಗಗಳಲ್ಲಿ ಕಂಡು ಬಂದಿದ್ದು, ಅವರು ಬಹುಬೇಗ ನಾಯಕರಿಗೆ ಶರಣಾಗಿ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುತ್ತಾರೆ. ಸಂಕಮ್ಮ, ಸಾಕಮ್ಮ, ಸಿನ್ನಮ್ಮ ಮೊದಲಾದವರು ಪತಿವ್ರತೆಯರು ಆಗಿರುವುದರಿಂದ ಪಾತಿವ್ರತ್ಯವನ್ನು ಸಾಬೀತು ಮಾಡುವಾಗ ಮಾತ್ರ ಸತ್ವ ಪರೀಕ್ಷೆಗಳಿಗೆ ಒಳಗಾಗಿ ನಂತರ ಜಯಸಾಧಿಸುವುದರೊಂದಿಗೆ ಶಿಷ್ಟತೆಯನ್ನು ಹೊಂದಿರುವ ಮಹಾಮಾತೆಯರು ಎನಿಸಿಕೊಂಡಿದ್ದಾರೆ. ಈ ಕನ್ನಡ ಜನಪದ ಮಹಾಕಾವ್ಯಗಳಲ್ಲಿ ದುಷ್ಟರನ್ನು ಶಿಕ್ಷಿಸಬೇಕು ಶಿಷ್ಟರನ್ನು ಕಾಪಾಡಬೇಕು ಎಂಬ ಧೋರಣೆ ಅತ್ಯಂತ ಮುಖ್ಯವೆನಿಸಿದೆ. ದುಷ್ಟತೆಗೆ ಶಿಕ್ಷೆ ಶಿಷ್ಟತೆಗೆ ರಕ್ಷೆ

ಎಂಬುದು ಮನುಷ್ಯ ಕುಲದ ಧರ್ಮವೂ ಆಗಿದೆ. ನಮ್ಮ ದೇಶದ ಭಗವದ್ಗೀತೆಯಲ್ಲಿ ಈ ಧೋರಣೆಗೆ ಮಾನ್ಯತೆಯಿದೆ. ಸಮಾಜದಲ್ಲಿ ಶಿಷ್ಟತೆಯನ್ನು ಉಳಿಸಬೇಕಾದರೆ ದುಷ್ಟರನ್ನು ಸದೆಬಡಿಯಲೇಬೇಕೆಂಬ ದೃಢನಿರ್ಧಾರವನ್ನು ಕನ್ನಡ ಜನಪದ ಮಹಾಕಾವ್ಯಗಳಲ್ಲಿ ಕಾಣಬಹುದಾಗಿದೆ.

**ಆಕರ ಗ್ರಂಥಗಳು**


- ಭಟ್ಟ ಜಿ.ಎಸ್. (1996). ಮಹಾಕಾವ್ಯ ಒಂದು ಅವಲೋಕನ. ಚೇತನ ಬುಕ್ ಹೌಸ್.
- ಬೋರಲಿಂಗಯ್ಯ ಹಿ.ಚಿ. (ಸಂ.) (1997). *ಮಂಟೆಸ್ವಾಮಿ–ಬುಡಕಟ್ಟು ಕಾವ್ಯಮಾಲೆ.* ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ.
- ಚೆಲುವರಾಜು. (1997). ಜುಂಜಪ್ಪ ಬುಡಕಟ್ಟು ಕಾವ್ಯಮಾಲೆ. ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ.
- ಕೇಶವನ್ ಪ್ರಸಾದ್ ಕೆ. (1997). *ಮಲೆಮಾದೇಶ್ವರ–ಬುಡಕಟ್ಟು ಕಾವ್ಯಮಾಲೆ.* ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ.
- ಒಗ್ಗರು ಹನುಮಂತಪ್ಪ. (ಸಂ.) (1999). *ಮೈಲಾರಲಿಂಗನ ಕಾವ್ಯ.* ಕರ್ನಾಟಕ ಜನಪದ ಕಾವ್ಯಮಾಲೆ.
- ಪರಮಶಿವಯ್ಯ ಜೀ.ಶಂ. (1979). *ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ